(ನಿಲುವಳಿ ಸೂಚನೆ ಮಂಡನೆಗೆ ಅನುಮತಿ ನಿರಾಕರಿಸಲಾಯಿತು. ಸದರಿ ವಿಷಯದ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿ ನೀಡುವುದಾಗಿ ಮಾನ್ಯ ಸಭಾಧ್ಯಕ್ಷರು ತಿಳಿಸಿದರು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ನಾಳೆ ಬೇಡ, ಇವತ್ತು ಪ್ರಶ್ನೋತ್ತರ ಆದ ತಕ್ಷಣ ತೆಗೆದುಕೊಳ್ಳಿ.

**ಅಧ್ಯಕ್ಷರು:** ಈಗ ಬೇಡ, ಮೊದಲು ಪ್ರಶ್ನೋತ್ತರ ಆಗಲಿ. ಇಲಾಖಾ ಬೇಡಿಕೆ ಮೇಲೆ 2–3 ಜನ ಮಾತನಾಡುತ್ತೇವೆಂದು ಹೇಳಿದ್ದಾರೆ. ಮಾತನಾಡುವವರು ಯಾರೂ ಬಂದಿಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಯಾರೂ ಬಂದಿಲ್ಲ. ಆದ್ದರಿಂದ, ನಮಗೆ ಅವಕಾಶ ಕೊಡಿ.

**ಅಧ್ಯಕ್ಷರು:** ಈಗ ಪ್ರಶ್ನೋತ್ತರ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, question held over ಆಗಿ 20 ದಿನ ಆಗಿದೆ. ಆದರೆ ಇವತ್ತೂ ಸಹ ಆ ಪ್ರಶ್ನೆ ಬಂದಿಲ್ಲ.

**ಅಧ್ಯಕ್ಷರು:** ಆಯಿತು, ಅದು ಬರಲಿ ಇರಿ, ನೋಡೋಣ. ಈ ಪ್ರಶ್ನೋತ್ತರ.

**ಬಸ್ ಡಿಪೋ ಮತ್ತು ಬಸ್ ತಂಗುದಾಣ ಅಭಿವೃದ್ಧಿ**

**27 (3636); ಶ್ರೀ ವಿಶ್ವನಾಥ್ .ಈ. ಪಾಟೀಲ್ (ಬೈಲಹೊಂಗಲ)**

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಜಾಗ ಇರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಇಲ್ಲಿರುವ ಒಟ್ಟು ಜಾಗ ಎಷ್ಟು;

ಆ) ಈ ಜಾಗದಲ್ಲಿ ಇರುವ ಬಸ್ ಡಿಪೋ ಮತ್ತು ಬಸ್ ತಂಗುದಾಣ ಅವ್ಯವಸ್ಥೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ, ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ನಿಜವೇ (ಪ್ರಸ್ತಾವನೆ ಸಲ್ಲಿಸಿರುವವರ ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು?

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)**

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಪಟ್ಟಣದಲ್ಲಿ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಜಾಗದ ವಿವರ ಈ ಕೆಳಕಂಡಂತಿವೆ:–

| | | |
|---|---|---|
| ಬಸ್ ನಿಲ್ದಾಣ | 2 ಎಕರೆ 04 ಗುಂಟೆ | ಸರ್ವೆ ನಂ:428/2ಎ+ಬಿ |
| ಬಸ್ ಘಟಕ | 2 ಎಕರೆ 05 ಗುಂಟೆ | |
| ಖಾಲಿ ನಿವೇಶನ | 3 ಎಕರೆ 20 ಗುಂಟೆ | ಸರ್ವೆ ನಂ: 428 ಎ ಮತ್ತು ಬಿ, 2ಬಿ |
| ಒಟ್ಟು | **7 ಎಕರೆ 29 ಗುಂಟೆ** | |

ಆ) **ಮತ್ತು** ಇ) ಬೈಲಹೊಂಗಲ ಬಸ್ ನಿಲ್ದಾಣವನ್ನು 2012–13 ನೇ ಸಾಲಿನಲ್ಲಿ ₹. 93.00 ಲಕ್ಷಗಳ ವೆಚ್ಚದಲ್ಲಿ ಡಾಂಬರೀಕರಣದೊಂದಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಮೇಲ್ದರ್ಜೆಗೇರಿಸಲಾಗಿದೆ. ಮುಂದುವರೆದು, 2015–16 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೈಲಹೊಂಗಲದಲ್ಲಿ ನೂತನ ಬಸ್ ಘಟಕವನ್ನು ನಿರ್ಮಿಸಲು ₹. 250.00 ಲಕ್ಷಗಳನ್ನು ಮೀಸಲಿರಿಸಲಾಗಿದೆ. ಬಸ್ ಘಟಕದ ಕಾಮಗಾರಿಯು ಪೂರ್ಣಗೊಂಡ ನಂತರ ಬೈಲಹೊಂಗಲದ ಬಸ್ ನಿಲ್ದಾಣವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುವುದು.